# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 120 (90) |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ತಿಪ್ಪಣ್ಣಪ್ಪ ಕಮಕನೂರ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| **ಉತ್ತರಿಸುವ ದಿನಾಂಕ** | : | 17.08.2026 |
| **ಉತ್ತರಿಸುವ ಸಚಿವರು** | : | ಇಂಧನ ಮತ್ತು ಪ್ರವಾಸೋದ್ಯಮ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹಾವೇರಿ ಜಿಲ್ಲೆಯ ಚೌಡಯ್ಯದಾನಪುರ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಕಾಯಕ ಕ್ಷೇತ್ರ ಹಾಗೂ ಐಕ್ಯ ಸ್ಥಳ ಸಮಾಧಿ/ಗದ್ದುಗೆ ನಿರ್ಮಾಣದ ಬಗ್ಗೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಮತ್ತು ಜಿಲ್ಲಾಡಳಿತದೊಂದಿಗೆ ಸಮಾಲೋಚನೆ ಹಾಗೂ ಸಮನ್ವಯ ಕಾರ್ಯ ಯಾವ ಹಂತದಲ್ಲಿದೆ; | ರಾಷ್ಟ್ರೀಯ ಸಂರಕ್ಷಿತ ಸ್ಮಾರಕವಾಗಿರುವ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಸಮಾಧಿಯನ್ನು ಅಭಿವೃದ್ಧಿ ಪಡಿಸುವ ಸಂಬಂಧ ಸರ್ಕಾರದ ಆದೇಶ ಸಂಖ್ಯೆ: ಟಿಒಆರ್ 106 ಟಿಡಿವಿ 2025, ದಿನಾಂಕ:19.09.2025ರಲ್ಲಿ ಸಮಿತಿಯನ್ನು ರಚಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ). ಇದು ಕೇಂದ್ರ ಸಂರಕ್ಷಿತ ಸ್ಮಾರಕದ ನೂರು ಮೀಟರ್ ನಿಷೇದಿತ ಪ್ರದೇಶದಲ್ಲಿ ಬರುತ್ತದೆ. ಆದ್ದರಿಂದ, ಈ ಸಂಬಂಧ ರೂಪುರೇಷೆಗಳನ್ನು ಸಿದ್ದಪಡಿಸಿ ಭಾರತೀಯ ಪುರಾತತ್ವ ಸಂರಕ್ಷಣಾ (ASI) ಇಲಾಖೆಯ ಅನುಮೋದನೆ ಪಡೆದು ನಂತರ ಅಂಬಿಗರ ಚೌಡಯ್ಯನವರ ಸಮಾಧಿಯ ಗದ್ದುಗೆಯ ನಿರ್ಮಾಣದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು |
| ಆ) | ಈ ವಿಚಾರವನ್ನು ಆದ್ಯತೆಯ ಮೇಲೆ ಪರಿಗಣಿಸಿ ತುರ್ತು ಸಭೆಗಳನ್ನು ನಡೆಸಿ ಅಂಬಿಗರ ಚೌಡಯ್ಯನವರ ಸಮಾಧಿಯ ಗದ್ದುಗೆಯನ್ನು ಕೂಡಲ ಸಂಗಮ ಬಸವಣ್ಣನವರ ಗದ್ದುಗೆಯನ್ನು ಕಟ್ಟಿದ ಮಾದರಿಯಲ್ಲಿ ಕಟ್ಟಲು ಸರ್ಕಾರ ಮುಂದಾಗುವುದೇ? | |

**TOR 168 TDV 2026**

(ಕೆ.ಜೆ.ಜಾರ್ಜ್)
ಇಂಧನ ಹಾಗೂ ಪ್ರವಾಸೋದ್ಯಮ ಸಚಿವರು